# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 20–03–2021 ರಂದು ಸಮಯ 10.30 ಗಂಟೆಗೆ ವಾರ್ಡ್ ಸಂಖ್ಯೆ: 155 ಹನುಮಂತನಗರಕ್ಕೆ ಸಂಬಂಧಪಟ್ಟಂತೆ ಹರಿಹರಗುಡ್ಡ ಉದ್ಯಾನವನ (ತಿಮ್ಮೇಶಪ್ರಭು ಉದ್ಯಾನವನ)ದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು:**

1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ ಆನಂದ್.ಜಿ, ಕಿರಿಯ ಅಭಿಯಂತರರು ವಾ.ನಂ.–155 – ಸದಸ್ಯ ಕಾರ್ಯದರ್ಶಿ
3. ಶ್ರೀ. ನಟರಾಜ್ (ಹಿ.ಆ.ಪ.) – ಸದಸ್ಯರು
4. ಶ್ರೀ ಪ್ರಕಾಶ್ (ಟಿ.ಇ.)– ಸದಸ್ಯರು
5. ಶ್ರೀ.ರಾಮಚಂದ್ರ (ಕಿ.ಅ–155) ಬೆಸ್ಕಾಂ
6. ಶ್ರೀ ಪಿಳ್ಳಪ್ಪ – ಸಾರ್ವಜನಿಕರು.
7. ಶ್ರೀ ಉದಯ– ಸಾರ್ವಜನಿಕರು.
8. ಶ್ರೀ ಕೆ.ಜಿ.ಗೀರಿಶ್ – ಸಾರ್ವಜನಿಕರು.
9. ಶ್ರೀ ಸುರೇಶ್ ಕುಮಾರ್ – ಸಾರ್ವಜನಿಕರು.
10. ಶ್ರೀಮತಿ ಆರ್.ಪದ್ಮ – ಸಾರ್ವಜನಿಕರು.

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ 155ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ನೆರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳು.**

1) 4ನೇ ಅಡ್ಡರಸ್ತೆ (ಡಾ|| ಶಿವರಾಮ ಕಾರಂತ್ ರಸ್ತೆ) ಹನುಮಂತನಗರದಲ್ಲಿ ಫುಟ್‌ಪಾತ್ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಬಹಳ ವರ್ಷಗಳಾಗಿದ್ದು ರಸ್ತೆಯು ಹಾಗೂ ಫುಟ್‌ಪಾತ್ ತುಂಬಾ ಹಾಳಾಗಿರುವುದರಿಂದ ಅಭಿವೃದ್ಧಿಪಡಿಸಲು ಕೋರಿ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕಿರಿಯ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

**ಬೀದಿ ದೀಪ ನಿರ್ವಹಣೆ ಕುರಿತು**

1) ವಿದ್ಯುತ್ ದೀಪ ಉರಿಯುತ್ತಿಲ್ಲವೆಂದು ದಿನಾಂಕ:06–03–2021ರಂದು ನಡೆದ ಸಭೆಯಲ್ಲಿ ಹನುಮಂತನಗರ ವಾರ್ಡ್‌ನಲ್ಲಿ ಬರುವ ಗಂಗಾನದಿ ರಸ್ತೆ, ಹಿಂದೂ ಮಹಾಸಾಗರ ರಸ್ತೆ, ಬ್ರಹ್ಮಪುತ್ರ ನದಿ ರಸ್ತೆ, ಮತ್ತು ಮಹದೇವಶ್ವರ ದೇವಸ್ಥಾನದ ಎದುರು ಸರಿಪಡಿಸಿರುವುದಾಗಿ ವಿದ್ಯುತ್ ದೀಪ ನಿರ್ವಹಣೆಯ ಗುತ್ತಿಗೆದಾರರು ಸಭೆಯಲ್ಲಿ ತಿಳಿಸಿರುತ್ತಾರೆ.

ಮು.ತಿ.ನೋ

Scanned with CamScanner

1) ಹನುಮಂತನಗರ ವಾರ್ಡ್‌ನಲ್ಲಿ ಬರುವ ಕಾವೇರಿ ನದಿ ರಸ್ತೆ, ಅರ್ಕಾವತಿ ನದಿ ರಸ್ತೆಗಳಲ್ಲಿ ವಿದ್ಯುತ್ ದೀಪ ಉರಿಯುತ್ತಿಲ್ಲ ವೆಂದು ಹಾಗೂ ಇದನ್ನು ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿದ್ಯುತ್ ದೀಪ ಸರಿಪಡಿಸಲು ವಿದ್ಯುತ್ ವಿಭಾಗ(ದ) ಬಿ.ಬಿ.ಎಂ.ಪಿ. ರವರಿಗೆ ಸೂಚಿಸಲಾಗುವುದು ಎಂದು ಕಿರಿಯ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

**ಆರೋಗ್ಯ ಇಲಾಖೆ/ಘನತ್ಯಾಜ್ಯ ಇಲಾಖೆ**

1) ಹನುಮಂತನಗರದ ವಾರ್ಡ್‌ನಲ್ಲಿ ಇರುವ ಎಲ್ಲಾ ಪೌರಕಾರ್ಮಿಕರಿಗೆ ಕೋವಿಡ್ ಲಸಿಕೆಯನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು ಕ್ರಮಕೈಗೊಳ್ಳಲು ಸೂಚಿಸಿದರು.

ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ಹನುಮಂತನಗರ ರವರು ತಿಳಿಸಿದರು.

2) ವಾರ್ಡ್ ವ್ಯಾಪ್ತಿಯಲ್ಲಿ ವಿಪರೀತ ಸೊಳ್ಳೆಗಳು ಹೆಚ್ಚಾಗಿ ಇರುವುದರಿಂದ ಔಷಧಿ ಸಿಂಪಡಿಸಿ ಸೊಳ್ಳೆ ನಿಯಂತ್ರಣಕ್ಕೆ ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ಹನುಮಂತನಗರ ರವರು ತಿಳಿಸಿದರು.

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೆಯ ಮತ್ತು ಮೂರನೇ ಶನಿವಾರದಂದು ವಾರ್ಡ್ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತಾ, ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

20-03-21

| | |
|---|---|
| ಕಾರ್ಯದರ್ಶಿ | ಅಧ್ಯಕ್ಷರು ವಾರ್ಡ್ ಸಮಿತಿ |
| ಕಿರಿಯ ಅಭಿಯಂತರರು | ಹಾಗೂ ನೋಡಲ್ ಅಧಿಕಾರಿಗಳು |
| ವಾರ್ಡ್ ಸಂಖ್ಯೆ-155 ಹನುಮಂತನಗರ | ವಾರ್ಡ್ ಸಂಖ್ಯೆ-155 ಹನುಮಂತನಗರ |

ಪ್ರತಿಯನ್ನು,

1. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
2. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ,
3. ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
4. ಆರೋಗ್ಯ ವೈದ್ಯಾಧಿಕಾರಿಗಳು, ಬಸವನಗುಡಿ ವಿಭಾಗ ರವರ ಅವಗಾಹನೆಗೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೆಸ್ಕಾಂ ಹನುಮಂತನಗರ ರವರ ಅವಗಾಹನೆಗೆ.
6. ಪೋಲೀಸ್ ಇನ್ಸ್‌ಪೆಕ್ಟರ್, ಬಸವನಗುಡಿ ಸಂಚಾರಿ ಪೋಲೀಸ್ ಠಾಣೆ ರವರ ಅವಗಾಹನೆಗೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ., ಎಂ.ಎನ್.ಕೆ ಪಾರ್ಕ್, ಬಸವನಗುಡಿ ರವರ ಅವಗಾಹನೆಗೆ.
8. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
9. ಕಛೇರಿ ಕಡತಕ್ಕೆ.

Scanned with CamScanner